ಇ) ಪ್ರಸಕ್ತ ಸಾಲಿನಲ್ಲಿ ಉಳಿದ 25 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ (ಅನುಬಂಧ–2) ಹಾಗೂ ಎಲ್ಲಾ ಖಾಸಗಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸದರಿ ಕಾರ್ಯಕ್ರಮವನ್ನು ವಿಸ್ತರಿಸುವ ಪ್ರಕ್ರಿಯೆ ಜಾರಿಯಲ್ಲಿದೆ ವಿವರವನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ ಬೀದರ್ ಜಿಲ್ಲೆಯಲ್ಲಿ ಈ ಕೆಳಕಂಡ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳು ಎಜುಸ್ಯಾಟ್ ಕಾರ್ಯಕ್ರಮ ಚಾಲ್ತಿಯಲ್ಲಿರುತ್ತದೆ

ಕ್ರ.ಸಂ	ಸರ್ಕಾರಿ	ಅನುದಾನಿತ	ಖಾಸಗಿ
1	ಸ ಪಾ ಬೀದರ್	ಜೆ ಎನ್ ಪಾಲಿಟೆಕ್ನಿಕ್, ರಾಣಾ ಕುಶನೂರು, ಬೀದರ್	ನಿಟ್ಟೂರು ಎಜುಕೇಷನ್ ಸೊಸೈಟಿ, ಬೀದರ್
2	ಸ ಪಾ ಔರದ್	–	ಹರಳಯ್ಯ ಪಾಲಿಟೆಕ್ನಿಕ್, ಬಾಲ್ಕಿ, ಬೀದರ್
3	–	–	ಹೆಚ್ ಕೆ ಡಿಇಟಿ ಪಾಲಿಟೆಕ್ನಿಕ್, ಹುಮ್ನಾಬಾದ್

ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ 5 ಲಕ್ಷ ರೂಗಳ ವೆಚ್ಚ ಮಾಡಲು ಉದ್ದೇಶಿಸಲಾಗಿರುತ್ತದೆ

ಉಚಿತ ಬೈಸಿಕಲ್‌ಗಳ ವಿತರಣೆ

390(434); ಶ್ರೀ ವಿಜಯಕುಮಾರ್ ಬಿ.ಎಸ್ (ಜಯನಗರ)

ಅ) ಈ ಸಾಲಿನಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆಯೇ, ಎಷ್ಟು ಜನ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ; ಬೈಸಿಕಲ್ ವಿತರಣೆ ತಡವಾಗಲು ಕಾರಣಗಳೇನು,

ಆ) ಉಚಿತ ಬೈಸಿಕಲ್ ಯೋಜನೆ ವ್ಯಾಪ್ತಿಗೆ ಒಳಪಡುವ ವಿದ್ಯಾರ್ಥಿಗಳೆಷ್ಟು; (ತರಗತಿವಾರು ವಿವರ ನೀಡುವುದು)

ಇ) ಬೈಸಿಕಲ್ ಪೂರೈಸಲು ಯಾವಾಗ ಟೆಂಡರ್ ಕರೆಯಲಾಗಿದೆ, ಎಷ್ಟು ಕಂಪೆನಿಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವು, ಟೆಂಡರ್‌ನಲ್ಲಿ ಭಾಗವಹಿಸಿದ್ದ ಕಂಪನಿಗಳು ನಮೂದಿಸಿದ್ದ ದರವೆಷ್ಟು,

ಈ) ಯಾವ ಕಂಪನಿಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ, ಪ್ರತಿ ಬೈಸಿಕಲ್‌ಗೆ ತಗಲುವ ವೆಚ್ಚವೆಷ್ಟು;

ಉ) ಟೆಂಡರ್ ಪಡೆದಿರುವ ಕಂಪನಿ ಈವರೆಗೆ ಪೂರೈಸಿರುವ ಬೈಸಿಕಲ್‌ಗಳೆಷ್ಟು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2013–14ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಮಕ್ಕಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗುತ್ತಿದೆ ಈ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ ಇಡಿ 05 ಯೋಯೋಕ 2013ಯನ್ನು ದಿನಾಂಕ 25–09–2013ರಂದು ಹೊರಡಿಸಲಾಗಿದೆ

ಈ ವರೆವಿಗೆ 55,678 ಬೈಸಿಕಲ್‌ಗಳನ್ನು ವಿತರಣೆ ಮಾಡಲಾಗಿದೆ

ದಿನಾಂಕ 01–10–2013ರಂದು ಸರಬರಾಜು ಆದೇಶ ನೀಡಲಾಗಿದೆ ಸರಬರಾಜು ಆದೇಶ ನೀಡಿದ ದಿನಾಂಕದಿಂದ 120 ದಿನಗಳ ಒಳಗಾಗಿ ಶಾಲೆಗಳಿಗೆ ಬೈಸಿಕಲ್‌ಗಳನ್ನು ಸರಬರಾಜುದಾರರು ಪೂರೈಸಬೇಕಾಗಿದೆ ಸರಬರಾಜುದಾರರು ಬೈಸಿಕಲ್‌ಗಳ ಬಿಡಿ ಭಾಗಗಳನ್ನು ತಯಾರಿಕಾ ಘಟಕದಿಂದ ತಂದು ರಾಜ್ಯದ ತಾಲ್ಲೂಕು ಕೇಂದ್ರಗಳಲ್ಲಿ ಅವುಗಳನ್ನು ಜೋಡಣೆ ಮಾಡಿ ನಂತರ ಶಾಲೆಗಳಿಗೆ ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಉಸ್ತುವಾರಿಯಲ್ಲಿ ವಿತರಣೆ ಮಾಡಲಾಗುತ್ತದೆ

ಆ) ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮಾತ್ರ ಬೈಸಿಕಲ್ ವಿತರಿಸಲಾಗುತ್ತಿದೆ 2013–14ನೇ ಸಾಲಿನಲ್ಲಿ 270157 ಹೆಣ್ಣು ಮಕ್ಕಳಿಗೆ ಹಾಗೂ 278163

ಗಂಡು ಮಕ್ಕಳಿಗೆ ಒಟ್ಟು 548320 ಮಕ್ಕಳಿಗೆ ಬೈಸಿಕಲ್ ವಿತರಿಸಲಾಗುತ್ತಿದೆ

ಇ) 2013–14ನೇ ಸಾಲಿಗೆ ಬೈಸಿಕಲ್ ಸರಬರಾಜಿಗಾಗಿ ದಿನಾಂಕ 14–02–2013ರಂದು 60 ದಿನಗಳ ಮೂರ್ಣಾವಧಿ ಇ–ಟೆಂಡರನ್ನು ಕರೆಯಲಾಗಿದೆ. ಸದರಿ ಟೆಂಡರ್ನಲ್ಲಿ (1) ಮೆ॥ ಹೀರೋ ಸೈಕಲ್ಸ್. ಲಿ, ಲೂಧಿಯಾನ, (2) ಮೆ॥ ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ ಮತ್ತು (3) ಮೆ॥ ಏವನ್ ಸೈಕಲ್ಸ್ ಲಿ, ಲೂಧಿಯಾನ ಈ ಮೂರು ಸಂಸ್ಥೆಯವರು ಭಗವಹಿಸಿದ್ದರೂ ಸಹ ತಾಂತ್ರಿಕ ದೋಷದಿಂದಾಗಿ ಕೇವಲ ಒಂದು ಸಂಸ್ಥೆಯ ಬಿಡ್ ಅಂಗೀಕೃತವಾಗಿದ್ದ ಕಾರಣ ಸದರಿ ಟೆಂಡರನ್ನು ರದ್ದುಪಡಿಸಿ ದಿನಾಂಕ·15–05–2013ರಂದು 20 ದಿನಗಳ ಅಲ್ಪಾವಧಿಯ ಮರು ಟೆಂಡರನ್ನು ಕರೆಯಲಾಗಿದೆ.

ಸದರಿ ಟೆಂಡರ್ನಲ್ಲಿಯೂ ಸಹ ಈ ಕೆಳಕಂಡ 3 ಕಂಪನಿಗಳು ಭಾಗವಹಿಸಿದ್ದವು:

(1) ಮೆ॥ ಹೀರೋ ಸೈಕಲ್ಸ್. ಲಿ., ಲೂಧಿಯಾನ.

(2) ಮೆ॥ ಟಿ ಐ.ಸೈಕಲ್ಸ್ ಆಫ್ ಇಂಡಿಯಾ. ಚೆನ್ನೈ ಮತ್ತು

(3) ಮೆ॥ ಏವನ್ ಸೈಕಲ್ಸ್ ಲಿ., ಲೂಧಿಯಾನ

ಕ್ರ.ಸಂ	ಸಂಸ್ಥೆಯ ಹೆಸರು	ಬಿಡ್‌ನಲ್ಲಿನಮೂದಿಸಿದ್ದ ಪ್ರತಿ ಬೈಸಿಕಲ್‌ನ ದರ	
		ಹೆಣ್ಣುಮಕ್ಕಳ ಬೈಸಿಕಲ್	ಗಂಡುಮಕ್ಕಳ ಬೈಸಿಕಲ್
1	ಮೆ॥ ಹೀರೋ ಸೈಕಲ್ಸ್ ಲಿ, ಲೂಧಿಯಾನ,	3564	3492
2	ಮೆ॥ ಏವನ್ ಸೈಕಲ್ಸ್ ಲಿ, ಲೂಧಿಯಾನ	3564	3492
3	ಮೆ॥ ಟಿ ಐ ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ	3647	3568

ಈ) ಪ್ರತಿ ಹೆಣ್ಣು ಮಕ್ಕಳ ಬೈಸಿಕಲ್‌ಗೆ ₹ 3170/– ಮತ್ತು ಪ್ರತಿ ಗಂಡು ಮಕ್ಕಳ ಬೈಸಿಕಲ್‌ಗೆ ₹ 3105/– (ಎಲ್ಲಾ ವೆಚ್ಚಗಳನ್ನು ಸೇರಿ) ನಿಗಧಿಪಡಿಸಲಾಗಿದೆ ಸಂಸ್ಥೆವಾರು ನೀಡಿರುವ ಟೆಂಡರ್ ವಿವರ:

ಸಂಸ್ಥೆಯ ಹೆಸರು	ಹೆಣ್ಣು ಮಕ್ಕಳ ಬೈಸಿಕಲ್	ಗಂಡು ಮಕ್ಕಳ ಬೈಸಿಕಲ್	ಒಟ್ಟು ಬೈಸಿಕಲ್ ಸಂಖ್ಯೆ	ಒಟ್ಟು ಟೆಂಡರ್ ಮೊತ್ತ
ಮೆ॥ ಹೀರೋ ಸೈಕಲ್ಸ್. ಲಿ,	137285	137889	275174	863338795
ಮೆ॥ ಏವನ್ ಸೈಕಲ್ಸ್ ಲಿ,	132872	140274	273146	856755010
ಒಟ್ಟು	270157	278163	548320	1720093805

ಉ) ಕಂಪನಿವಾರು ಬೈಸಿಕಲ್ ಪೂರೈಸಿರುವ ವಿವರ

Name of Company	Order Quantity	Delivered to Schools
M/s Avon Cycle Ltd Ludhiana	275174	23215
M/s Hero Cycles Ltd Ludhiana	273146	32463
Total	**548320**	**55678**